### ಎನ್‌ಐಟಿಕೆಯಲ್ಲಿ ಮತ ಎಣಿಕೆ, ಬಿಗಿ ಕಾವಲು

# ಭದ್ರತಾ ಕೊಠಡಿಯಲ್ಲಿ ಮತದಾರರ ಭವಿಷ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಎಂಟೂ ಕ್ಷೇತ್ರಗಳಲ್ಲಿ ಚಲಾವಣೆಗೊಂಡ ಮತಗಳಿರುವ ಮತಯಂತ್ರಗಳನ್ನು ಡಿಮಸ್ಟರಿಂಗ್ ಕೇಂದ್ರಗಳಿಂದ ಸುರತ್ಕಲ್‌ನ ಎನ್‌ಐಟಿಕೆಯ ಮತ ಎಣಿಕೆ ಕೇಂದ್ರಕ್ಕೆ ಗುರುವಾರ ಸಾಗಿಸಲಾಗಿದೆ.

ಎನ್‌ಐಟಿಕೆ ಮತ ಎಣಿಕೆ ಕೇಂದ್ರಗಳಲ್ಲಿ ಸ್ಥಾಪಿಸಲಾದ ಪ್ರತ್ಯೇಕ ಭದ್ರತಾ ಕೊಠಡಿಗಳಲ್ಲಿ ಮತಯಂತ್ರಗಳನ್ನು ಭದ್ರವಾಗಿಡಲಾಗಿದೆ. ಭದ್ರತಾ ಕೊಠಡಿಗಳ ಸುತ್ತಲೂ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕೇಂದ್ರದ ಆಸುಪಾಸಿನ ಚಲನವಲನಗಳ ಬಗ್ಗೆ ನಿಗಾ ಇಡುವುದಕ್ಕಾಗಿ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಭದ್ರತಾ ಕೊಠಡಿಗಳ ಬಳಿಯೂ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮತ ಎಣಿಕೆ ಕೇಂದ್ರವನ್ನು ಪೊಲೀಸ್ ಶ್ವಾನದಳದವರು ಗುರುವಾರ ತಪಾಸಣೆ ನಡೆಸಿದರು.

ಅಭ್ಯರ್ಥಿಗಳ ಪ್ರತಿನಿಧಿಗಳೂ ಮತಎಣಿಕೆ ಕೇಂದ್ರದಲ್ಲಿ ವಾಸ್ತವ್ಯವಿದ್ದು, ಭದ್ರತಾ ಕೊಠಡಿಗಳಲ್ಲಿನ ಚಲನವಲನಗಳ ಮೇಲೆ ನಿಗಾ ಇಡುವುದಕ್ಕೆ ಈ ಸಲ ಅವಕಾಶ ಕಲ್ಪಿಸಲಾಗಿದೆ.

‘ಡಿಮಸ್ಟರಿಂಗ್ ಕೇಂದ್ರಗಳಿಂದ ಮತಯಂತ್ರಗಳನ್ನು ಹಾಗೂ ವಿವಿಪ್ಯಾಟ್‌ಗಳನ್ನು ಎನ್‌ಐಟಿಕೆಗೆ ಗುರುವಾರ ರವಾನಿಸಿದ್ದೇವೆ. ಈ ಸಂದರ್ಭದಲ್ಲಿ ಅಭ್ಯರ್ಥಿಗಳ ಪ್ರತಿನಿಧಿಗಳೂ ಬೆಂಗಾವಲು ವಾಹನಗಳ ಜೊತೆ ಬರುವುದಕ್ಕೆ ಅವಕಾಶ ಕಲ್ಪಿಸಿದ್ದೆವು. ಅಭ್ಯರ್ಥಿಗಳ ಪ್ರತಿನಿಧಿಗಳು ಎನ್‌ಐಟಿಕೆ ಮತ ಎಣಿಕೆ ಕೇಂದ್ರದಲ್ಲಿ ವಾಸ್ತವ್ಯವಿದ್ದು, ಅವರಿಗೆ ಎಲ್ಲ ರೀತಿಯ ವ್ಯವಸ್ಥೆ ಕಲ್ಪಿಸಿದ್ದೇವೆ’ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಮಾಹಿತಿ ನೀಡಿದರು. ಮತಯಂತ್ರಗಳಿರುವ ಭದ್ರತಾ ಕೊಠಡಿಗಳ ಬಾಗಿಲುಗಳ ಬೀಗಕ್ಕೆ ಮುದ್ರೆ ಹಾಕಲಾಗಿದೆ. ಈ ಭದ್ರತಾ ಕೇಂದ್ರಗಳಿಗೆ ಯಾರೂ ಪ್ರವೇಶಿಸದಂತೆ ತಡೆಯಲು ಬಾಗಿಲುಗಳನ್ನು ಪ್ಲೈವುಡ್‌ನಿಂದ ಮುಚ್ಚಲಾಗಿದೆ.



ಸುರತ್ಕಲ್ ಎನ್‌ಐಟಿಕೆಯ ಮತ ಎಣಿಕೆ ಕೇಂದ್ರದ ಭದ್ರತಾ ಕೊಠಡಿಗಳನ್ನು ಸಶಸ್ತ್ರ ಭದ್ರತಾ ಸಿಬ್ಬಂದಿ ಕಾವಲು ಕಾಯುತ್ತಿರುವುದು

**ದಕ್ಷಿಣ ಕನ್ನಡ ಜಿಲ್ಲೆ: ಮತದಾನ ಪ್ರಮಾಣದ ವಿವರ**

| ಕ್ಷೇತ್ರ | ಒಟ್ಟು ಮತದಾರರು | ಚಲಾಯಿತ ಮತ | ಅಂಚೆ ಮತ | ಒಟ್ಟು ಚಲಾಯಿತ ಮತ | ಶೇಕಡಾ |
|---|---|---|---|---|---|
| ಬೆಳ್ತಂಗಡಿ | 2,28,871 | 1,86,506 | 2,654 | 1,89,160 | 82.65 |
| ಮೂಡುಬಿದಿರೆ | 2,05,065 | 1,56,735 | 2,054 | 1,58,789 | 77.43 |
| ಮಂಗಳೂರು ನಗರ ಉತ್ತರ | 2,49,421 | 1,80,209 | 2,515 | 1,82,724 | 73.26 |
| ಮಂಗಳೂರು ನಗರ ದಕ್ಷಿಣ | 2,45,744 | 1,59,424 | 2,580 | 1,62,004 | 65.92 |
| ಮಂಗಳೂರು (ಉಳ್ಳಾಲ) | 2,05,129 | 1,58,607 | 1,373 | 1,59,980 | 77.99 |
| ಬಂಟ್ವಾಳ | 2,28,377 | 1,83,428 | 2,147 | 1,85,575 | 81.26 |
| ಪುತ್ತೂರು | 2,12,753 | 1,70,366 | 2,184 | 1,72,550 | 81.10 |
| ಸುಳ್ಯ | 2,06,029 | 1,63,072 | 2,646 | 1,65,718 | 80.43 |
| ಒಟ್ಟು | 17,81,389 | 13,58,347 | 18,153 | 13,76,500 | 77.27 |

## ಶೇ 77.27 ಮತದಾನ

ದಕ್ಷಿನ ಕನ್ನಡ ಜಿಲ್ಲೆಯಲ್ಲಿ ಈ ಸಲ ಶೇ 77.27ರಷ್ಟು ಮತದಾನವಾಗಿದೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಶೇ 77.67 ರಷ್ಟು ಮತದಾನವಾಗಿತ್ತು. ಬೆಳ್ತಂಗಡಿ ಕ್ಷೇತ್ರದಲ್ಲಿ ಜಿಲ್ಲೆಯಲ್ಲೇ ಗರಿಷ್ಠ ( ಶೇ 82.65) ಪ್ರಮಾಣದ ಮತದಾನವಾಗಿದೆ. ಮಂಗಳೂರು ನಗರ ದಕ್ಷಿಣ ಕ್ಷೇತ್ರದಲ್ಲಿ ಕನಿಷ್ಠ (ಶೇ 65.92) ಮತದಾನವಾಗಿದೆ. ಕಳೆದ ಬಾರಿ ಅತಿ ಹೆಚ್ಚು ಮತ ಚಲಾವಣೆಯಾಗಿದ್ದ ಸುಳ್ಯ ಕ್ಷೇತ್ರದಲ್ಲಿ (ಶೇ 83.98) ಈ ಸಲ ಮತದಾನ ಪ್ರಮಾಣ ಶೇ 3.55ರಷ್ಟು ಕಡಿಮೆ ಆಗಿದೆ.

Prajavani, Date:12/05/23 p, no-03